**MAY 09, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

**<><><>**

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಮುಖ್ಯಾಂಶಗಳು:**

**<><><>**

- **ರಾಜ್ಯದ ಬಾಹ್ಯಾಕಾಶ ಪರಿಸರ ವ್ಯವಸ್ಥೆಯ,** 30ಕ್ಕೂ ಹೆಚ್ಚು ಪಾಲುದಾರರೊಂದಿಗೆ, ಸಚಿವ ಪ್ರಿಯಾಂಕ ಖರ್ಗೆ, ಮಹತ್ವದ ಸಭೆ.
- **ಥಲಸ್ಸೆಮಿಯಾ ಗುರುತಿಸುವಿಕೆ** ಹಾಗೂ ಸುಧಾರಿತ ಆರೈಕೆ, ಆದ್ಯತೆಯಾಗಲಿ – ಪದ್ಮಶ್ರೀ, ಡಾಕ್ಟರ್ ಸುರೇಶ ಹನಗವಾಡಿ.
- **ಬೆಂಗಳೂರಿನ, ಶ್ರೀ ಕಂಠೀರವ ಸ್ಟುಡಿಯೋದ,** ವಜ್ರಮಹೋತ್ಸವ; ಶಿವಮೊಗ್ಗ ಹಾಗೂ ವಿಜಯನಗರ ಜಿಲ್ಲೆಯಲ್ಲಿ, ನೂತನ ಘಟಕ.
- **ಆಕಾಶವಾಣಿಯ ಧಾರವಾಡ ಕೇಂದ್ರ ಆಯೋಜಿಸಿದ್ದ,** ‘*ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್*’ ಯಶಸ್ವಿ.

**<><><>**

**ಈಗ ವಾರ್ತೆಗಳ ವಿವರ**

**<><><>**

**ರಾಜ್ಯದ, ಬಾಹ್ಯಾಕಾಶ ಪರಿಸರ ವ್ಯವಸ್ಥೆಯ,** 30ಕ್ಕೂ ಹೆಚ್ಚು ಪಾಲುದಾರರೊಂದಿಗೆ, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಬೆಂಗಳೂರಿನಲ್ಲಿ ಸಮಾಲೋಚನಾ ಸಭೆ ನಡೆಸಿದರು. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ರಾಜ್ಯದ ಸ್ಪೇಸ್‌ಟೆಕ್ ವಲಯದಲ್ಲಿ, ನವೋದ್ಯಮಗಳು, ಕೈಗಾರಿಕೆಗಳು, ಸಾಂಸ್ಥಿಕ ಪಾಲುದಾರರು ಸೇರಿದಂತೆ, ಶೈಕ್ಷಣಿಕ ಸಂಸ್ಥೆಗಳ ಪಾತ್ರದ ಕುರಿತು, ಚಿಂತನ–ಮಂಥನ ನಡೆಯಿತು. ಡೀಪ್‌ಟೆಕ್, ದಶಕದ ಮಾರ್ಗಸೂಚಿಯ ಕಾರ್ಯತಂತ್ರದ ಭಾಗವಾಗಿ, ಸ್ಪೇಸ್‌ಟೆಕ್‌ನಲ್ಲಿ ಹೂಡಿಕೆ ಮಾಡುವುದನ್ನು

ಮುಂದುವರಿಸಲಾಗುವುದು ಎಂದು, ಸಚಿವ ಖರ್ಗೆ ತಿಳಿಸಿದ್ದಾರೆ. ಕರ್ನಾಟಕಕ್ಕಾಗಿ ಬಾಹ್ಯಾಕಾಶ ದತ್ತಾಂಶ ಆಡಳಿತ, ಹವಾಮಾನ ಸ್ಥಿತಿಸ್ಥಾಪಕತ್ವ, ಕೃಷಿ, ವಿಪತ್ತು ನಿರ್ವಹಣೆಯನ್ನು ತಾವು ಮೌಲ್ಯಮಾಪನ ಮಾಡುತ್ತಿರುವುದಾಗಿ, ಹೇಳಿದ್ದಾರೆ.

<><><>

**ಮಂಗಳೂರಿನ ಸುಲ್ತಾನ್ ಬತ್ತೇರಿ** ಬಳಿ, ಫಲ್ಗುಣಿ ನದಿಯಿಂದ, ತಣ್ಣೀರು ಬಾವಿ ಸಂಪರ್ಕಿಸುವ, ಅತ್ಯಾಧುನಿಕ ತಂತ್ರಜ್ಞಾನದ, ಬೋ ಸ್ಟ್ರಿಂಗ್ ಸೇತುವೆ ಕಾಮಗಾರಿ, ಸೆಪ್ಟಂಬರ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು, ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವ, ದಿನೇಶ ಗುಂಡೂರಾವ ತಿಳಿಸಿದ್ದಾರೆ. ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಅವರು, ಸರ್ವ ಸೌಲಭ್ಯ ನಗರಿ ಯೋಜನೆಯಡಿ, 64 ಕೋಟಿ ರೂಪಾಯಿ ವೆಚ್ಚದಲ್ಲಿ, ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬೆಂಗ್ರೆ ಭಾಗದ, 4 ಸಾವಿರ ಕುಟುಂಬಗಳಿಗೆ ಪ್ರಯೋಜನವಾಗಲಿದೆ, ಎಂದರು. ಬ್ಲೂ ಫ್ಲ್ಯಾಗ್ ಬೀಚ್‌ಗೂ ಈ ಸೇತುವೆ ಎರಡನೆ ಸಂಪರ್ಕ ರಸ್ತೆಯಾಗಿ ಬಳಕೆಯಾಗಲಿದ್ದು, ಪ್ರವಾಸೋದ್ಯಮಕ್ಕೂ ಒತ್ತು ಸಿಗಲಿದೆ ಎಂದು, ಸಚಿವರು ನುಡಿದರು.

<><><>

**ಮಾಜಿ ಮುಖ್ಯಮಂತ್ರಿ,** ಬಿಜೆಪಿ ಹಿರಿಯ ನಾಯಕ, ಬಿ.ಎಸ್. ಯಡಿಯೂರಪ್ಪ ಅವರ, 50 ವರ್ಷಗಳ ರಾಜಕೀಯ ಜೀವನದ, ಜನಸೇವೆ ಸ್ಮರಿಸಲು, ಚಿತ್ರದುರ್ಗದಲ್ಲಿ ಇಂದು ಆಯೋಜಿತ, ಬಿ.ಎಸ್.ವೈ. ಅಭಿಮಾನೋತ್ಸವಕ್ಕೆ, ಕೇಂದ್ರ ಗೃಹ ಖಾತೆ ಸಚಿವ ಅಮಿತ ಶಾ ಸೇರಿದಂತೆ, ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರು ನಿನ್ನೆ, ಪುರ ಪ್ರವೇಶ ಮಾಡಿದ್ದು, ಸಹಸ್ರಾರು ಅಭಿಮಾನಿಗಳು, 50ಕ್ಕೂ ಹೆಚ್ಚು ಕಲಾ ತಂಡಗಳು ಸ್ವಾಗತಿಸಿದವು.

<><><>

**ಭಾರತೀಯ ಅರಣ್ಯ ಸೇವೆ** – ಐ.ಎಫ್.ಎಸ್. ಪರೀಕ್ಷೆಯ, 2025ನೇ ಸಾಲಿನ ಫಲಿತಾಂಶವನ್ನು, ಕೇಂದ್ರ ಲೋಕಸೇವಾ ಆಯೋಗ, ಪ್ರಕಟಿಸಿದೆ. ಬಸವರಾಜ ಕೆಂಪವಾಡ, ಮೊದಲ ರ್‍ಯಾಂಕ್ ಗಳಿಸಿದ್ದಾರೆ. ಅನ್ನುಮಾನ ಕುಮಾರ ಸಿಂಗ್ ಹಾಗೂ ಸಿದ್ಧಾರ್ಥ, ಕ್ರಮವಾಗಿ ಎರಡು ಮತ್ತು ಮೂರನೇ ರ್‍ಯಾಂಕ್ ಪಡೆದಿದ್ದಾರೆ.

<><><>

**ರಾಜ್ಯಾದ್ಯಂತ** ‘ಆರೋಗ್ಯ ಸೇತು ಸಂಚಾರಿ ಆರೋಗ್ಯ ಘಟಕ’ ಯೋಜನೆ, ಜಾರಿಗೊಂಡಿದೆ. ಗ್ರಾಮೀಣ ಹಾಗೂ ದೂರದ ಸ್ಥಳಗಳಲ್ಲಿ, ತುರ್ತು ಆರೋಗ್ಯ ಸೇವೆ ಒದಗಿಸಲು, ಸಂಚಾರಿ ಇ–ಬೈಕ್ ಒದಗಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಡಾಕ್ಟರ್ ವಾಸಂತಿ ಅಮರ, ಆಪ್ಟಮ್ ಇಂಡಿಯಾ ಹಾಗೂ ಯುನೈಟೆಡ್ ವೇ, ಬೆಂಗಳೂರು ವತಿಯಿಂದ, ಕಾರ್ಪೋರೆಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ, 45 ಇ–ಬೈಕ್‌ಗಳನ್ನು ಹಸ್ತಾಂತರಿಸಿದರು.

<><><>

**‘ಥಲಸ್ಸೆಮಿಯಾ ಮರೆಯಾಗಿಲ್ಲ; ರೋಗ ನಿರ್ಣಯವಾಗದವರನ್ನು** ಕಂಡುಹಿಡಿದು, ಬೆಂಬಲಿಸುವುದು’ ಎಂಬ ಧ್ಯೇಯದೊಂದಿಗೆ, ಆನುವಂಶಿಕ ರಕ್ತ ಕಾಯಿಲೆ, ಥಲಸ್ಸೆಮಿಯಾ ಜನ ಜಾಗೃತಿ ದಿನ ಆಚರಿಸಲಾಯಿತು. ಭಾರತ, ಗಣನೀಯ ಸಂಖ್ಯೆಯಲ್ಲಿ, ಥಲಸ್ಸೆಮಿಯಾ ಪೀಡಿತರನ್ನು ಹೊಂದಿದ್ದು, 50 ಮಿಲಿಯನ್ ವಾಹಕಗಳನ್ನು ಹೊಂದಿದೆ, ಎಂದು ಅಂದಾಜಿಸಲಾಗಿದೆ. ಸುಧಾರಿತ ಆರೈಕೆ ಹಾಗೂ ಥಲಸ್ಸೆಮಿಯಾ ರೋಗಿಗಳನ್ನು ಗುರುತಿಸುವುದು, ಬಹುಮುಖ್ಯ ಎನ್ನುತ್ತಾರೆ, ದಾವಣಗೆರೆಯ, ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ವೈದ್ಯಕೀಯ ಮಹಾವಿದ್ಯಾಲಯದ, ರೋಗ ನಿದಾನಶಾಸ್ತ್ರದ ಪ್ರಾಧ್ಯಾಪಕ ಹಾಗೂ ಕರ್ನಾಟಕ ಹಿಮೋಫೀಲಿಯಾ ಸೊಸಾಯಿಟಿ ಅಧ್ಯಕ್ಷ, ಪದ್ಮಶ್ರೀ ಡಾಕ್ಟರ್ ಸುರೇಶ ಹನಗವಾಡಿ.

**<><><>**

**ಗುಬ್ಬಿ ವೀರಣ್ಣನವರಿಂದ ಸ್ಥಾಪಿಸಲ್ಪಟ್ಟ,** ಬೆಂಗಳೂರಿನ ಶ್ರೀ ಕಂಠೀರವ ಸ್ಟುಡಿಯೋದ, ವಜ್ರಮಹೋತ್ಸವದ ಸವಿನೆನಪಿಗಾಗಿ, ಶಿವಮೊಗ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ನೂತನ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು, ಶ್ರೀ ಕಂಠೀರವ ಸ್ಟುಡಿಯೋ’ದ ಅಧ್ಯಕ್ಷ, ಮೆಹಬೂಬ್ ಪಾಷಾ ತಿಳಿಸಿದ್ದಾರೆ. ಶಿವಮೊಗ್ಗದಲ್ಲಿ, ಜಿಲ್ಲಾಧಿಕಾರಿ ಎನ್.ಹೇಮಂತ ಅವರೊಂದಿಗೆ, ಅವರು ಸಭೆ ನಡೆಸಿ, ಮಾತನಾಡಿದರು. ಚಿತ್ರೀಕರಣದ ಚಟುವಟಿಕೆಗಳನ್ನು ವಿಕೇಂದ್ರೀಕರಿಸಿ, ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಲು, ಶಿವಮೊಗ್ಗ ತಾಲೂಕು, ಹಾರನಹಳ್ಳಿ ಹೋಬಳಿಯ, ಜಾಜುಹಳ್ಳಿ ಗ್ರಾಮದ, 25 ಎಕರೆ ಜಮೀನು ಮಂಜೂರು ಮಾಡುವಂತೆ ಕೋರಲಾಗಿದೆ, ಎಂದರು.

**<><><>**

***ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್,*** 1936ರ ಜೂನ್ 8 ರಂದು, ಆಲ್ ಇಂಡಿಯಾ ರೇಡಿಯೋ – AIR ಎಂದು ಮರುನಾಮಕರಣಗೊಂಡಿತು. ‘ಬಹುಜನ ಹಿತಾಯ; ಬಹುಜನ ಸುಖಾಯ’ ಧ್ಯೇಯದೊಂದಿಗೆ, ಭಾರತೀಯ ಪ್ರಸಾರ ಸೇವೆ ಆರಂಭಗೊಂಡ, ಸುವರ್ಣ ಘಳಿಗೆಯ, 90ನೇ ವರ್ಷಾಚರಣೆ ನಿಮಿತ್ತ, ಆಕಾಶವಾಣಿ ಧಾರವಾಡ ಕೇಂದ್ರ, *‘ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್’* ಆಯೋಜಿಸಿತ್ತು.

**<><><>**

**ಉತ್ತರಕನ್ನಡ ಜಿಲ್ಲೆ, ಹಳಿಯಾಳದ,** ಕೆ.ಎಲ್.ಎಸ್. ಶ್ರೀ ವಿಶ್ವನಾಥರಾವ ದೇಶಪಾಂಡೆ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಅಭಿಮಾನಿ ಶ್ರೋತೃಗಳು, ಕಲಾವಿದರು ಹಾಗೂ ಆಕಾಶವಾಣಿ ಸಿಬ್ಬಂದಿ ಸೇರಿದಂತೆ, ಇನ್ನೂರಕ್ಕೂ ಹೆಚ್ಚು ಜನ, ಫಿಟ್ ಇಂಡಿಯಾ ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು.

**<><><>**

**ಆಕಾಶವಾಣಿಯ ಅಭಿಮಾನಿ,** ಧಾರವಾಡದ ನಿರ್ಮಲಾ ಪಾಟೀಲ, ವಾಕಥಾನ್ ನಲ್ಲಿ ಭಾಗವಹಿಸಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಹೊಸ ದಿಲ್ಲಿಯ, ಕೇಂದ್ರ ಸಾಹಿತ್ಯ ಅಕಾದೆಮಿ,** ಆಕಾಶವಾಣಿ ಕಲಬುರ್ಗಿ ಕೇಂದ್ರದ ಸಹಯೋಗದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, **"ಕೇಳು ಕಥೆ"** ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ಕಲಬುರ್ಗಿ ಆಕಾಶವಾಣಿ ಕೇಂದ್ರದ, ಸ್ಟುಡಿಯೋದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ, ಎಚ್.ಟಿ. ಪೋತೆ, ಸಿದ್ಧರಾಮ ಹೊನ್ಕಲ್, ಸಂಧ್ಯಾ ಹೊನಗುಂಟಿಕರ ಹಾಗೂ ಮಹಾಂತೇಶ ನವಲಕಲ್, ಕೇಳು ಕಥೆ ಪ್ರಸ್ತುತ ಪಡಿಸಲಿದ್ದಾರೆ. ಆಕಾಶವಾಣಿ ಕಲಬುರ್ಗಿ ಕೇಂದ್ರದ, ತಾಂತ್ರಿಕ ವಿಭಾಗದ ಮುಖ್ಯಸ್ಥ ಬಿ. ಗೋಪಾಲ ನಾಯಕ, ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಬಿ. ಸಿದ್ದಣ್ಣ ಪಾಲ್ಗೊಳ್ಳಲಿದ್ದು, ಕೇಂದ್ರ ಸಾಹಿತ್ಯ ಅಕಾದೆಮಿ, ಸಲಹಾ ಸಮಿತಿ ಸದಸ್ಯ ಡಾಕ್ಟರ್ ಬಸವರಾಜ ಸಾದರ, ಸಮಾರೋಪ ನುಡಿಗಳನ್ನಾಡಲಿದ್ದಾರೆ.

<><><>

**ಇಂದು, ಭಾರತೀಯ ಸಂಗೀತಶಾಸ್ತ್ರದ** ದಿನಾಚರಣೆ. ಈ ಹಿನ್ನೆಲೆ, ಮೈಸೂರು ವಿಶ್ವವಿದ್ಯಾಲಯದ, ನಾಲ್ವಡಿ ಕೃಷ್ಣರಾಜ ಒಡೆಯರ ಭವನದಲ್ಲಿ, ಡಾಕ್ಟರ್ ರಾ.ಸತ್ಯನಾರಾಯಣ ಅವರ, ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆ, ಇಂದು ಸಂಜೆ 5.30ಕ್ಕೆ ನೆರವೇರಲಿದೆ ಎಂದು, ಡಿ.ವಿ.ಜಿ. ಬಳಗ ಪ್ರತಿಷ್ಠಾನದ ಸಂಚಾಲಕ, ಕನಕರಾಜು ತಿಳಿಸಿದ್ದಾರೆ.

<><><>

**ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ,** ಗೌರವ ಡಾಕ್ಟರೇಟ್‌ಗೆ ಭಾಜನರಾದ, ಹಿರಿಯ ಸಮಾಜವಾದಿ ನಾಯಕ, ಸ್ವಾತಂತ್ರ್ಯ ಸೇನಾನಿ, ಕೋಣಂದೂರು ಲಿಂಗಪ್ಪ ಅವರ ಮನೆಗೆ ಭೇಟಿ ನೀಡಿದ, ಜಿಲ್ಲಾ ಉಸ್ತುವಾರಿ ಸಚಿವ, ಮಧು ಬಂಗಾರಪ್ಪ, ಗೌರವಿಸಿ, ಅಭಿನಂದಿಸಿದರು. ತೀರ್ಥಹಳ್ಳಿ ತಾಲೂಕು, ಕೋಣಂದೂರಿಗೆ ತೆರಳಿ, ಕುವೆಂಪು ವಿಶ್ವವಿದ್ಯಾಲಯದ ಅಧಿಕಾರಗಳೊಂದಿಗೆ, ಗೌರವ ಡಾಕ್ಟರೇಟ್ ಪುರಸ್ಕಾರವನ್ನು ಸಹ ಈ ಸಂದರ್ಭದಲ್ಲಿ, ಗಣ್ಯರು ಹಿರಿಯರಿಗೆ ನೀಡಿ, ಗೌರವಿಸಿದರು.

<><><>

**ಭಾರತದ ಟೆನಿಸ್ ಆಟಗಾರ್ತಿಯರಾದ,** ವೈದೇಹಿ ಚೌಧರಿ ಮತ್ತು ಝೀಲ್ ದೇಸಾಯಿ, ತುಮಕೂರು ಓಪನ್, ಇಂಟರ್ ನ್ಯಾಶನಲ್ ಟೆನಿಸ್ ಫೆಡರೇಷನ್, ವಿಮೆನ್ಸ್ 35, ಮಹಿಳಾ ಟೆನಿಸ್ ಟೂರ್ನಿಯ ಸಿಂಗಲ್ಸ್ ನಲ್ಲಿ, ಸೆಮಿಫೈನಲ್ ತಲುಪಿದ್ದಾರೆ. ತುಮಕೂರು ವಿಶ್ವವಿದ್ಯಾಲಯದ, ಟೆನಿಸ್ ಕ್ರೀಡಾಂಗಣದಲ್ಲಿ ನಡೆದ, ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ, ಮೂರನೇ ಶ್ರೇಯಾಂಕದ ವೈದೇಹಿ, 6–4, 6–7, 7–5 ಸೆಟ್‌ಗಳಲ್ಲಿ, ಆರನೇ ಶ್ರೇಯಾಂಕದ, ರಷ್ಯಾದ ಇಕತೆರಿನಾ ಯಶೀನಾ ಅವರನ್ನು, ಪರಾಭವಗೊಳಿಸಿದರು. ನಾಲ್ಕನೇ ಶ್ರೇಯಾಂಕದ ಝೀಲ್ ದೇಸಾಯಿ, 4–6, 6–3, 7–5 ಸೆಟ್‌ಗಳ ಅಂತರದಲ್ಲಿ, ಪೋಲೆಂಡ್’ನ ಅರಿನಾ ಅರಿಫುಲಿನಾ ವಿರುದ್ಧ, ಗೆಲುವು ದಾಖಲಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**<><><>**

- **ರಾಜ್ಯದ ಬಾಹ್ಯಾಕಾಶ ಪರಿಸರ ವ್ಯವಸ್ಥೆಯ,** 30ಕ್ಕೂ ಹೆಚ್ಚು ಪಾಲುದಾರರೊಂದಿಗೆ, ಸಚಿವ ಪ್ರಿಯಾಂಕ ಖರ್ಗೆ, ಮಹತ್ವದ ಸಭೆ.
- **ಥಲಸ್ಸೆಮಿಯಾ ಗುರುತಿಸುವಿಕೆ** ಹಾಗೂ ಸುಧಾರಿತ ಆರೈಕೆ, ಆದ್ಯತೆಯಾಗಲಿ – ಪದ್ಮಶ್ರೀ, ಡಾಕ್ಟರ್ ಸುರೇಶ ಹನಗವಾಡಿ.
- **ಬೆಂಗಳೂರಿನ, ಶ್ರೀ ಕಂಠೀರವ ಸ್ಟುಡಿಯೋದ,** ವಜ್ರಮಹೋತ್ಸವ; ಶಿವಮೊಗ್ಗ ಹಾಗೂ ವಿಜಯನಗರ ಜಿಲ್ಲೆಯಲ್ಲಿ, ನೂತನ ಘಟಕ.
- **ಆಕಾಶವಾಣಿಯ ಧಾರವಾಡ ಕೇಂದ್ರ ಆಯೋಜಿಸಿದ್ದ,** '*ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್*' ಯಶಸ್ವಿ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

**<><><>**